ಸದನದಲ್ಲಿ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**
ನೂರ ನಲವತ್ತೊಂದನೆಯ ಅಧಿವೇಶನ
ಮಂಗಳವಾರ, ದಿನಾಂಕ: 29ನೇ ಸೆಪ್ಟಂಬರ್, 2020

ಪೊಲೀಸ್ ಅಧಿಕಾರಿಗಳ ಮತ್ತು ಸಿಬ್ಬಂದಿಯವರ ಗೃಹ ನಿರ್ಮಾಣ ಸಂಘದ ಬಗ್ಗೆ

ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) -

92 (1050) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪೊಲೀಸ್ ಅಧಿಕಾರಿಗಳ ಮತ್ತು ಸಿಬ್ಬಂದಿಯವರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತವು ಯಾವ ವರ್ಷದಲ್ಲಿ ಸ್ಥಾಪನೆಯಾಗಿದೆ ಹಾಗೂ ಎಷ್ಟು ಸಂಖ್ಯೆಯ ಸದಸ್ಯ ಹಾಗೂ ಸಹ ಸದಸ್ಯರುಗಳನ್ನು ಹೊಂದಿರುತ್ತದೆ;

(ಆ) ಸದರಿ ಸಹಕಾರ ಸಂಘವು ಎಷ್ಟು ಕಡೆ ಸದಸ್ಯರುಗಳಿಗೆ ನಿವೇಶನ ಹಂಚಿಕೆ ಮಾಡಲು ಉದ್ದೇಶಿಸಿದೆ ಅಥವಾ ನೀಡಿದೆ;

(ಇ) ಸದರಿ ಸಂಘವು ನೆಲಮಂಗಲದ ಹತ್ತಿರ ನಿವೇಶನ ನೀಡಲು ಉದ್ದೇಶಿಸಿದೆಯೇ; ಉದ್ದೇಶಿಸಿದ್ದಲ್ಲಿ ಎಷ್ಟು ಜನ ಸದಸ್ಯರಿಗೆ ಹಾಗೂ ಸಹ ಸದಸ್ಯರುಗಳಿಗೆ ಹಂಚಿಕೆ ಮಾಡಲಾಗುವುದು;

(ಈ) ಸದರಿ ಸಂಘವು ನಿವೇಶನ ಹಂಚಿಕೆ ಮಾಡಲು ವಿಳಂಬವಾಗಿರಲು ಕಾರಣಗಳೇನು; (ವಿವರ ನೀಡುವುದು)

(ಉ) ಸದರಿ ಸಂಘದ ಸದಸ್ಯ ಹಾಗೂ ಸಹ ಸದಸ್ಯರುಗಳಿಗೆ ನಿವೇಶನ ನೀಡದೆ ಇರುವುದರಿಂದ ಅವರ ಕೋರಿಕೆಗೆ ಅನುಗುಣವಾಗಿ ಅವರು ಪಾವತಿಸಿರುವ ಹಣ ವಾಪಸ್ ಮಾಡಲಾಗುವುದೇ;

(ಊ) ಈ ಸಂಘವು ಎಷ್ಟು ಮುಂಗಡ ಹಣವನ್ನು ಸಂಗ್ರಹಿಸಿದೆ; ಯಾವ ಯಾವ ಉದ್ದೇಶಗಳಿಗೆ ಮುಂಗಡ ಹಣವನ್ನು ವಿನಿಯೋಗಿಸಲಾಗಿರುತ್ತದೆ ಹಾಗೂ ಸದಸ್ಯ ಮತ್ತು ಸಹ ಸದಸ್ಯರುಗಳು ಎಷ್ಟು ಮುಂಗಡ ಹಣ ಪಾವತಿಸಿರುತ್ತಾರೆ? (ವಿವರಗಳನ್ನು ಒದಗಿಸುವುದು)